ಗಿರಿ ತಂದೆಯನ್ನೊಮ್ಮೆ ದಿಟ್ಟಿಸಿದ 'ಅಪ್ಪ, ನೀನಿನ್ನು ಯಾವ ಕಾಲದಲ್ಲಿ ಇದ್ದೀಯಾ?' ಎಂಬ ಅವನ ಅಸಮಾಧಾನದ ಅನುಭವವಾದರೂ ದೇಸಾಯರು ವಿಚಲಿತರಾಗಲಿಲ್ಲ.

'ಹಾಗಲ್ಲ, ನಮ್ಮ ಸಂಪ್ರದಾಯ, ಸಂಸ್ಕೃತಿ, ಸಂಸ್ಕಾರ ಎಲ್ಲಾ ಗೊತ್ತಿದ್ದವಳಾಗಿದ್ದರೇ...'

'ಅವಳು ವಿದ್ಯಾವಂತೆ, ಗುಣವಂತೆ. ಇಷ್ಟು ಮಾತ್ರ ಹೇಳಬಲ್ಲೆ.'

ಗಿರಿ ಸಮರ್ಥನೆಗೆ ತೊಡಗಿರುವಾಗಲೇ ಹೆಂಡತಿಯೂ ಬಂದು ಕೂತದ್ದು ನೋಡಿ ದೇಸಾಯರಿಗೆ ಸ್ವಲ್ಪ ಬಲ ಬಂದಂತಾಯಿತು. 'ಇರಲಿ–ಹೇಳು' ಎಂದು ತಾಯಿಯೂ ಪ್ರೋತ್ಸಾಹಿಸಿದ್ದರಿಂದ ಗಿರಿ ತುಸು ಚೇತರಿಸಿಕೊಂಡು 'ಇನ್ನೊಂದು ವಿಷಯಾನೂ ಇದೆ' ಎಂದು ಸಮಾಧಾನಿಸಿದ.

'ಅದನ್ನೂ ಹೇಳಿಬಿಡು.' ದೇಸಾಯರ ಮಾತಿನಲ್ಲಿ ಕಂಡೂಕಾಣದ ಒಗರಿತ್ತು. ಈಗಂತೂ ಹುಡುಗಿ ನಮ್ಮ ಜಾತಿಯವಳಲ್ಲ ಅಂತ ಗೊತ್ತಾಯಿತಲ್ಲ... ಇನ್ನೇನು...?'

'ಅವಳಿಗೊಂದು ಮಗು ಇದೆ. ಒಂದೂವರೆ ವರ್ಷದ್ದು.'

'ಅಂದರೇ...' ದೇಸಾಯರು ಕಕ್ಕಾಬಿಕ್ಕಿ.

'ಹೀಗಂದರೆ ನಾವೇನು ತಿಳಿಕೋಬೇಕು?' ತಾಯಿಗೂ ದುಗುಡ.

'ಅಲ್ಲ, ನಮ್ಮ ಆಚಾರ, ವಿಚಾರ ಎಲ್ಲ ಬಿಟ್ಟವನಂತೆ ಇವನು ಹೀಗೆ ಅತಿರೇಕಕ್ಕೆ ಹೋದರೆ ಸಹಿಸೋದು ಹೇಗೆ?' ದೇಸಾಯರಿಗೆ ಅಸ್ವಸ್ಥತೆಯ ಭಾಸ.

ತಂದೆ ತಾಯಿಗಳಿಗೆ ಆದ ಆಘಾತ ಅರಿವಾಗಿ ಗಿರಿ ಕ್ಷಣ ಕಾಲ ಸುಮ್ಮನೆ ಕೂತ. ಆ ಮೇಲೆ ನಿಧಾನವಾಗಿ ತನ್ನ ಮಾತಿನ ಆಂತರ್ಯ ಬಿಡಿಸಿಡತೊಡಗಿದ. 'ಅವಳ ಗಂಡ ನನ್ನ ಸ್ನೇಹಿತ. ಟೂರಿಗೆ ಹೋಗಿದ್ವಿ. ನಾನೇ ಕಾರು ನಡೆಸುತ್ತಿದ್ದೆ. ಅಪಘಾತ ಆಯ್ತು. ಅವನು ಹೋಗಿಬಿಟ್ಟ.'

ದೇಸಾಯರು ಬೆಚ್ಚಿ ಹೆಂಡತಿಯ ಮುಖ ನೋಡಿದರು. ಮಾತಾಡಲು ಅನುಮತಿ ಸಿಕ್ಕ ಭಾಸವಾಗಿ ಮಗನ ಕಡೆ ತಿರುಗಿದರು 'ಅಂದರೇ... ಅವಳನ್ನು ಮದುವೆಯಾಗಿ ಪ್ರಾಯಃಶ್ಚಿತ್ತ ಮಾಡಿಕೋಬೇಕೂಂತ ಇದೀಯೇನೋ?'

'ಪ್ರಾಯಃಶ್ಚಿತ್ತ ಅಂತಲ್ಲ. ಹೀಗೆ ಮಾಡಿದರೆ ಸರಿ ಆದೀತು ಅಂತ.'

'ಅವಳ ಮೇಲೆ ನಿನಗಿರೋದು ಪ್ರೀತಿಯೋ, ಅನುಕಂಪವೋ ಮೊದಲು ನಿರ್ಧರಿಸು. ಏಕೆಂದರೆ ಅನುಕಂಪದ ದಾಂಪತ್ಯ ಬಹಳ ಕಾಲ ಬಾಳೋದಿಲ್ಲ.'

ತಾಯಿಯ ಮಾತಿಗೆ ಅವನು ನಯವಾಗಿ ಹೇಳಿದ, 'ನನ್ನ ನಿರ್ಧಾರದಲ್ಲಿ ತಪ್ಪೇನೂ ಇಲ್ಲಮ್ಮ. ಇಬ್ಬರೂ ಪ್ರೀತಿಸಿಯೇ ಮದುವೆ ಆಗ್ತಿದೀವಿ.'

'ನಮ್ಮಲ್ಲೇ ಬೇಕಾದಷ್ಟು ಹೆಣ್ಣುಮಕ್ಕಳು ಸಿಗ್ತಿದ್ರಲ್ಲೋ. ಹೀಗೆ ದುಡುಕಬಾರದಿತ್ತು ನೀನು.' ತಂದೆಯ ಬೇಸರದ ಮಾತಿಗೆ ಗಿರಿ ಸ್ಥೈರಿಸಿದ. 'ಈಗ ನೀವು ಅವಳನ್ನು ಸೊಸೆ ಅಂತ ದಯವಿಟ್ಟು ಒಪ್ಪಿಕೋ ಬೇಕು' ಅಂದ.

ದೇಸಾಯರ ತಲೆ ಗಲ ಗಲ ಅಲುಗಾಡಿತು. 'ಮಗು ಬೇರೆ ಇದೆಯಲ್ಲಪ್ಪಾ' ಎಂದ ಅವರ ಧ್ವನಿಯಲ್ಲಿ ಹತಾಶೆ. ಗಿರಿ ಲೆಕ್ಕಿಸಲಿಲ್ಲ. 'ನಾಳೆಯಲ್ಲ ನಾಡಿದ್ದೇ ನಮ್ಮ ಮದುವೆ. ನಂತರ ಆ ಮಗು 'ನಿಧಿ' ನನ್ನ ಮಗಳಾಗ್ತಾಳೆ' ಎಂದವನು ತುಸು ತಡೆದು ಮತ್ತೆ ಮಾತು ಮುಂದುವರಿಸಿದ 'ನೀವಿಬ್ರೂ ಬರ್ತೀರಿತಾನೇ ಮದುವೆಗೆ?'

'ಇಷ್ಟೆಲ್ಲ ಆದಮೇಲೆ ಇನ್ನು ನಾವು ಹೇಳೋದಾದ್ರೂ ಏನಿದೆ?' ಎಂದು ದೇಸಾಯರು ಸ್ವಗತದಂತೆ ಮಾತಾಡಿ ಹೆಂಡತಿಯ ಕಡೆ ತಿರುಗಿ ಕೇಳಿದರು 'ಏನು ಮಾಡೋಣ?'